# ಸಮಗ್ರ ಶಿಕ್ಷಣ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು –560 001

ಸ.ಶಿ.ಕ/ ಕ.ಚೇ/ಕ.ಹ - 1/2022-23. ದಿನಾಂಕ 16/1/2023.

## ಜ್ಞಾಪನಾ

**ವಿಷಯ:** ಕ್ಲಸ್ಟರ್ ಗಳಲ್ಲಿ ಕಲಿಕಾ ಹಬ್ಬವನ್ನು ಆಚರಿಸುವ ಬಗ್ಗೆ.

**ಉಲ್ಲೇಖ:** 1. ಎಸ್.ಎಸ್.ಕೆ / ಕೆ.ಸಿ/ ಕ.ಹ/ 1-2022-23 ದಿನಾಂಕ:-30/11/2022.
2. ಕಲಿಕಾ ಚೇತರಿಕೆ ಉಪಕ್ರಮದ 3 ನೇ ಕೋರ್ ಸಮಿತಿ ಸಭೆಯ ನಡಾವಳಿ ದಿ.12/8/2022.

****************

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕನುಗುಣವಾಗಿ ಕ್ಲಸ್ಟರ್ ಗಳಲ್ಲಿ ಕಲಿಕಾ ಹಬ್ಬವನ್ನು ಆಚರಿಸ ಬೇಕಾಗಿದ್ದು, ಉಲ್ಲೇಖ 1 ರ ಎಲ್ಲಾ ಅಂಶಗಳನ್ನು ಕಾರ್ಯರೂಪಕ್ಕೆ ತರುತ್ತಾ ಈ ಕೆಳಗಿನ ಅಂಶಗಳನ್ನು ಪಾಲಿಸಲು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು, ಸಿ.ಆರ್.ಪಿ ಹಾಗೂ ಜವಾಬ್ದಾರಿಯನ್ನು ವಹಿಸಿದ ಸರ್ಕಾರಿ ಪ್ರೌಢಶಲೆಯ ಮುಖ್ಯಶಿಕ್ಷಕರಿಗೆ ತಿಳಿಸಿದೆ.

1. ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಈಗಾಗಲೇ ಕಲಿಕಾ ಹಬ್ಬಕ್ಕೆ ಸಂಬಂಧಿಸಿದ ತರಬೇತಿಗಳು ಮುಗಿದಿದ್ದು, ಉಲ್ಲೇಖ 1 ರಂತೆ 10-01-2023 ರಿಂದ 25-01-2023 ರೊಳಗೆ ಕ್ಲಸ್ಟರ್ ಗಳಲ್ಲಿ ಎರಡು ದಿನ ಕಲಿಕಾ ಹಬ್ಬವನ್ನು ಏರ್ಪಡಿಸಲು ತಿಳಿಸಲಾಗಿತ್ತು. ಹಾವೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಯುಕ್ತ ಜಿಲ್ಲಾ ಹಾಗೂ ತಾಲ್ಲೂಕು ಹಂತದ ತರಬೇತಿಗಳು 13/01/2023 ರವರೆಗೆ ಮುಂದೂಡಲ್ಪಟ್ಟಿದ್ದರಿಂದ ಕ್ಲಸ್ಟರ್ ಹಬ್ಬಗಳನ್ನು 10/1/2023 ರಿಂದ 31/01/2023 ರೊಳಗೆ ಎರಡು ದಿನ ಆಯೋಜಿಸಲು ಈ ಮೂಲಕ ತಿಳಿಸಿದೆ.17/01/2023 ಹಾಗೂ 18/01/2023 ಕೆ.ಎಸ್.ಕ್ಯೂ.ಎ.ಓ ವತಿಯಿಂದ SAS ಮೌಲ್ಯಾಂಕನ ನಡೆಯುತ್ತಿರುವುದರಿಂದ ಆ ದಿನಗಳನ್ನು ಹೊರತುಪಡಿಸಿ ಕ್ಲಸ್ಟರ್ ಕಲಿಕಾ ಹಬ್ಬವನ್ನು ಆಯೋಜಿಸುವುದು.

2. ನಗರ, ಪಟ್ಟಣ, ಹಳ್ಳಿ ಎಲ್ಲಾ ಪ್ರದೇಶಗಳಲ್ಲೂ ಕನ್ನಡ, ಉರ್ದು ಹಾಗೂ ಇತರೆ ಮಾಧ್ಯಮಗಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಕ್ಲಸ್ಟರ್ ಕಲಿಕಾ ಹಬ್ಬವನ್ನು ಆಚರಿಸುವುದು. ತನ್ಮೂಲಕ ಭಾವೈಕ್ಯತೆಯನ್ನು ಬೆಳೆಸುವುದು.

3. ಕ್ಲಸ್ಟರ್ ಕಲಿಕಾ ಹಬ್ಬಕ್ಕೆ ಕ್ಲಸ್ಟರ್ ನಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರಿಗೆ ಅನುಬಂಧ-1 ರಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

4. ಕ್ಲಸ್ಟರ್ ಕಲಿಕಾ ಹಬ್ಬಕ್ಕೆ ಬಿಡುಗಡೆ ಮಾಡಿದ ರೂ 15000=00 ಮೊತ್ತದಲ್ಲಿ ರೂ.10000=00 ಗಳನ್ನು ನಾಲ್ಕು ಕಾರ್ನರ್ ಗಳ ಚಟುವಟಿಕೆಗೆ ಬೇಕಾದ ಕಲಿಕಾ ಸಾಮಗ್ರಿಗಳನ್ನು ಖರೀದಿಸಲು ಬಳಸುವುದು. ರೂ.5000=00 ಗಳನ್ನು ಸಾದಿಲ್ವಾರಿಗಾಗಿ ಬಳಸುವುದು. ಸ್ಟ್ಯಾಪ್ಲರ್, ಪಿನ್, ಪೇಪರ್, ಬ್ಯಾನರ್, ಶೌಚಾಲಯ ಹಾಗೂ ಪರಿಸರದ ಸ್ವಚ್ಛತೆಗಾಗಿ, ಶುದ್ಧ ಕುಡಿಯುವ ನೀರಿಗಾಗಿ ಇತ್ಯಾದಿ.

ಜವಾಬ್ದಾರಿಯನ್ನುವಹಿಸಿದ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರು K2 ನಲ್ಲಿ ಅನುದಾನ ಸೆಳೆದು, ಖರ್ಚು ಭರಿಸಿ ಕ್ಲಸ್ಟರ್ ಹಬ್ಬ ಮುಗಿದ 15 ದಿನದೊಳಗಾಗಿ ಉಪಯೋಗಿತ ಪ್ರಮಾಣ ಪತ್ರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲ್ಲೂಕಿನ ಎಲ್ಲಾ ಕ್ಲಸ್ಟರ್ ನ ಉಪಯೋಗಿತ ಪ್ರಮಾಣ ಪತ್ರವನ್ನು ಕ್ರೋಢೀಕರಿಸಿ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ

Scanned with CamScanner

ಕಛೇರಿಗೆ ಸಲ್ಲಿಸುವುದು. ಜಿಲ್ಲೆಯ ಕಲಿಕಾ ಹಬ್ಬದ ನೋಡಲ್ ಅಧಿಕಾರಿಗಳು 25 ಫೆಬ್ರವರಿ 2023 ರೊಳಗೆ ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಕ್ಲಸ್ಟರ್ ಉಪಯೋಗಿತಾ ಪ್ರಮಾಣ ಪತ್ರವನ್ನು ಕ್ರೋಢೀಕರಿಸಿ ರಾಜ್ಯ ಕಛೇರಿಗೆ ಸಲ್ಲಿಸುವುದು.

5 ಕ್ಲಸ್ಟರ್ ಹಬ್ಬದ ಮೂಲಕ ಜನ ಪ್ರತಿನಿಧಿಗಳು, ಗ್ರಾಮಪಂಚಾಯಿತಿ ಅಧ್ಯಕ್ಷರು/ಸದಸ್ಯರು, ಎಸ್.ಡಿ.ಎಂ.ಸಿ ಅಧ್ಯಕ್ಷರು/ಸದಸ್ಯರು, ಪಾಲಕರು, ಸಮುದಾಯ ಶಾಲೆಗಳಿಗೆ ಬರುವಂತೆ ಹಾಗೂ ವಿದ್ಯಾರ್ಥಿಗಳು ಚಟುವಟಿಕೆ ಆಧಾರಿತ ಕಲಿಕೆಯನ್ನು ಸಾಧಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಸಮುದಾಯವನ್ನು ಕಲಿಕಾ ಹಬ್ಬದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಅನುಷ್ಠಾನಾಧಿಕಾರಿಗಳು ಕ್ರಮವಹಿಸುವುದು.

6. ಸ್ಥಳ ಆಯ್ಕೆ, ಮಕ್ಕಳ ಆಯ್ಕೆ, ಎಲ್ಲಾ ಅನುಷ್ಠಾನಾಧಿಕಾರಿಗಳ ಜವಾಬ್ದಾರಿ ಇವುಗಳನ್ನು ಕಛೇರಿ ಆದೇಶ ಸಂಖ್ಯೆ: ಎಸ್.ಎಸ್.ಕೆ /ಕೆ.ಸಿ/ ಕ.ಹ - 1/2022-23. ದಿನಾಂಕ 30/11/2022 ರಲ್ಲಿರುವಂತೆ ಕ್ರಮವಹಿಸುವುದು.

7. ಈಗಾಗಲೇ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಶೈಕ್ಷಣಿಕ ವಲಯದಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಕ್ಲಸ್ಟರ್ ಕಲಿಕಾ ಹಬ್ಬಗಳಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು.

ವಿದ್ಯಾರ್ಥಿಗಳು, ಪಾಲಕರು, ಸಮುದಾಯ ಸರ್ಕಾರಿ ಶಾಲೆಗಳತ್ತ ಬರುವಂತೆ ಕ್ಲಸ್ಟರ್ ಕಲಿಕಾ ಹಬ್ಬವನ್ನು ವ್ಯಸ್ಥಿತವಾಗಿ ಆಯೋಜಿಸುವುದು. ವಿದ್ಯಾರ್ಥಿಗಳಲ್ಲಿ ಕಲಿಕಾ ಹಬ್ಬದ ಮೂಲಕ ಭ್ರಾತೃತ್ವತೆ, ನಾಯಕತ್ವ ಗುಣ, ಪರಿಸರ ಜ್ಞಾನ, ಜೀವ ವೈವಿದ್ಯತೆ ಅರಿತುಕೊಂಡು ಪರಿಸರದ ಬಗ್ಗೆ ಕಾಳಜಿ ವಹಿಸುವಂತೆ ಪ್ರೇರೇಪಿಸುವುದು. ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯಗಳ ಜೊತೆಗೆ 21 ನೇ ಶತಮಾನದ ಕೌಶಲ್ಯಗಳನ್ನು ಸಂತೋಷದಾಯಕ ಕಲಿಕೆಯ ಮೂಲಕ ಸಾಧಿಸುವಂತೆ ಕಲಿಕಾ ಹಬ್ಬವನ್ನು ಕ್ಲಸ್ಟರ್ ಗಳಲ್ಲಿ ಆಚರಿಸಿ ಯಶಸ್ವಿಗೊಳಿಸುವುದು. ಕ್ಲಸ್ಟರ್ ಕಲಿಕಾ ಹಬ್ಬದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ನೇತೃತ್ವದಲ್ಲಿ ಶಾಲೆಗಳಲ್ಲಿ ಸಂಭ್ರಮದ ಶನಿವಾರದಂದು ಕಲಿಕಾ ಹಬ್ಬವನ್ನು ಆಚರಿಸುವುದು. ಪ್ರತಿಯೊಬ್ಬ ಅನುಷ್ಠಾನಾಧಿಕಾರಿಗಳು ಕ್ಲಸ್ಟರ್ ಹಾಗೂ ಶಾಲೆಗಳಲ್ಲಿ ಕಲಿಕಾ ಹಬ್ಬವನ್ನು ಯಶಸ್ವಿಗೊಳಿಸಲು ಈ ಮೂಲಕ ತಿಳಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.

ಸೂಕ್ತ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕ (ಆಡಳಿತ) ರವರಿಗೆ .
2. ರಾಜ್ಯದ ಎಲ್ಲಾ ಜಿಲ್ಲೆಗಳ ಕಲಿಕಾ ಹಬ್ಬದ ನೋಡಲ್ ಅಧಿಕಾರಿ ಡಿ.ವೈ.ಪಿ.ಸಿ .ರವರಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳವರಿಗೆ ಉಪನಿರ್ದೇಶಕ (ಆಡಳಿತ) ರವರ ಮೂಲಕ
4. ಕ್ಲಸ್ಟರ್ ಹಬ್ಬ ಆಚರಿಸುವ ಸರ್ಕಾರಿ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಾಗೂ ಸಿ.ಆರ್.ಪಿ.ಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ

ಪ್ರತಿ :-

1. ನಿರ್ದೇಶಕರು (ಗುಣಮಟ್ಟ) ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು
2. ಸಹನಿರ್ದೇಶಕರು (ಗುಣಮಟ್ಟ) ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು .
3. ಕಛೇರಿ ಪ್ರತಿ.

Scanned with CamScanner